# ಫನ್ ಅನ್‌ಲಿಮಿಟೆಡ್!

ನೀವು ಕೇವಲ ವರ್ಷಕ್ಕೊಮ್ಮೆ ದೀರ್ಘ ಪ್ರವಾಸ ಕೈಗೊಳ್ಳುವವರಾದರೆ ನಿಮ್ಮ ಮನಸ್ಸು ಮತ್ತು ಹೃದಯದಿಂದ ಅದನ್ನು ಸವಿಯಲು ನಿಮ್ಮಿಂದ ಸಾಧ್ಯವಾಗಬೇಕು. ಹೆಚ್ಚಾಗಿ ಇಡೀ ಕುಟುಂಬ ಜೊತೆಯಾಗಿ ಪ್ರವಾಸ ಕೈಗೊಳ್ಳಬೇಕಾದಲ್ಲಿ, ಎಲ್ಲ ಸದಸ್ಯರೂ ತಮ್ಮ ವ್ಯಕ್ತಿಗತ ಆಯ್ಕೆಯ ಅನ್ವಯ ಸವಿಯಲು ಸಮರ್ಥರಾಗಬೇಕು. ಎಲ್ಲರಿಗೂ ಎಲ್ಲದನ್ನೂ ಅಪರಿಮಿತ ಒದಗಿಸುವ ಏಕೈಕ ಪ್ರವಾಸಿ ತಾಣವೆಂದರೆ ಆಗ್ನೇಯ ಏಷ್ಯಾ. ಮೂರು ದೇಶಗಳಾದ ಸಿಂಗಪುರ, ಥೈಲ್ಯಾಂಡ್ ಮತ್ತು ಮಲೇಷಿಯಾ ಏಷ್ಯಾ ಖಂಡದ ದಕ್ಷಿಣ ಪೂರ್ವ ಅಂಚಿನಲ್ಲಿದ್ದು ಅಪರಿಮಿತ ಮನೋರಂಜನೆ ಮತ್ತು ಸದಾಕಾಲ ಉಳಿಯುವ ಆನಂದದ ಖಜಾನೆಗಳೆನಿಸಿವೆ.

ಏಷ್ಯಾದ ಸಂಸ್ಕೃತಿ, ಕಲೆ ಮತ್ತು ಆರ್ಥಿಕತೆಯ ಹಲವಾರು ಅಂಶಗಳು ಮಲೇಷಿಯದಲ್ಲಿ ಮೇಳೈಸಿವೆ, ಹೀಗಾಗಿ ಇದು 'ಮಲೇಷಿಯ ಟ್ರೂಲಿ ಏಷ್ಯಾ' ಎಂಬ ತನ್ನ ಹೆಸರನ್ನು ಉಳಿಸಿಕೊಂಡಿದೆ. ಈ ದೇಶದ ಅಧಿಕೃತ ಭಾಷೆ ಬಹಾಸ ಮಲಯ ಆಗಿದ್ದರೂ ಐತಿಹಾಸಿಕ ಅವಧಿಯಲ್ಲಿ ಈ ದೇಶದಲ್ಲಿ ಸಂಸ್ಕೃತ ಭಾಷೆಯನ್ನು ದೇವನಾಗರಿ ಲಿಪಿಯಲ್ಲಿ ವಿಸ್ತೃತವಾಗಿ ಬಳಕೆ ಮಾಡುತ್ತಿದ್ದರು. ಮಲೇಷಿಯಾವು ಭಾರತದ ಜೊತೆ ಪುರಾತನ ಸಂಬಂಧವನ್ನು ಹೊಂದಿದೆ. ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಮಾತನಾಡುವ ಭಾರತೀಯರು ಈ ದೇಶದ ಸಾಮಾಜಿಕ ಜೀವನದಲ್ಲಿ ಇನ್ನಿಲ್ಲದಂತೆ ಬೆರೆತುಹೋಗಿದ್ದಾರೆ. ಇದು ಇಸ್ಲಾಮಿಕ್ ಗಣರಾಜ್ಯವಾಗಿದ್ದರೂ ಇಲ್ಲಿ ದಕ್ಷಿಣ ಭಾರತೀಯರು 'ತೈಪುಸಂ' ಅಥವಾ ದೀಪಾವಳಿಯನ್ನು, ಮುಸ್ಲಿಂ ಜನರು ರಂಜಾನ್ ಹಬ್ಬವನ್ನು ಆಚರಿಸುವಷ್ಟೇ ಸಂಭ್ರಮದಿಂದ ಆಚರಿಸುವುದನ್ನು ಕಾಣಬಹುದು.

ಬಾಟು ಗುಹೆಗಳಲ್ಲಿ ಪುರಾತನ ಹಿಂದೂ ದೇವತೆಗಳ ವಿಗ್ರಹಗಳಿದ್ದಲ್ಲಿ, ಅತ್ಯಾಧುನಿಕವಾದ ಪೆಟ್ರೋನಾಸ್ ಅವಳಿ ಗೋಪುರಗಳು ಕೂಡ ಇಲ್ಲಿವೆ. 88 ಮಹಡಿಗಳನ್ನುಳ್ಳ ಈ ಒಂದನ್ನೊಂದು ಹೋಲುವ ಗೋಪುರಗಳು 42ನೇ ಮಹಡಿಯಲ್ಲಿರುವ 58 ಮೀಟರ್ ಉದ್ದದ ಸೇತುವೆಯಿಂದ ಸಂಪರ್ಕಿಸಲ್ಪಟ್ಟಿವೆ. ಸುಂದರ ಪೆಟ್ರೋನಾಸ್ ಗೋಪುರಗಳ ಹೊರತಾಗಿ, 1381 ಅಡಿ ಎತ್ತರಡ ಕೆ ಎಲ್ ಗೋಪುರವು ಮಲೇಷಿಯದ ರಾಜಧಾನಿ ನಗರವಾದ ಕೌಲಾಲಂಪುರದ ಪೈನಾಪಲ್ ಬೆಟ್ಟದ ಮೇಲಿದ್ದು ಪ್ರವಾಸಿಗರ ಗಮನವನ್ನು ಸೆಳೆಯುತ್ತದೆ. ಸಾಮಾನ್ಯವಾಗಿ ಮಲೇಷಿಯವು ತಾನು ತೆಗೆದುಕೊಳ್ಳುವ ಯೋಜನೆಗಳಲ್ಲಿ ಎತ್ತರ ಹಾಗೂ ಮಹತ್ತರವಾದುದನ್ನು ಸಾಧಿಸಲು ಬಯಸುತ್ತದೆ, ಇದರಿಂದಾಗಿಯೇ ಮನೋರಂಜನಾ ರಾಜಧಾನಿ ಎನಿಸಿರುವ ಗೆಂಟಿಂಗ್ ಹೈಲ್ಯಾಂಡ್ಸ್ ಅನ್ನು ಕೂಡ ದೊಡ್ಡ ಪರ್ವತದ ಮೇಲೆಯೇ ನಿರ್ಮಿಸಲಾಗಿದೆ. ಇಲ್ಲಿ ನಿರ್ಮಾಣ ಮಾಡಿರುವ ಹೊರಾಂಗಣ ಥೀಮ್ ಪಾರ್ಕ್ ಹಾಗೂ ಒಳಾಂಗಣ ಥೀಮ್ ಪಾರ್ಕ್ ಇವೆರಡೂ ಯುವಜನರನ್ನು ಹಾಗೂ ವಯಸ್ಕರನ್ನೂ ಸಮಾನವಾಗಿ ಮುದಕ್ಕೆ ಒಳಪಡಿಸುತ್ತವೆ.

ಮಲೇಷಿಯನ್ ಭೂಭಾಗದ ದೀರ್ಘವಾದ ಅಂಚಿನ ಮೇಲೆ ಅತ್ಯಂತ ಸಣ್ಣ ಏಷ್ಯನ್ ದೇಶವಾದ ಸಿಂಗಪುರವಿದೆ. ಒಂದು ಚುಕ್ಕಿಯಷ್ಟೇ ಇದು ಸಣ್ಣದಾಗಿದ್ದರೂ ಈ ದೇಶವು ವ್ಯಾಪಾರ, ವಹಿವಾಟು ಮತ್ತು ಪ್ರವಾಸೋದ್ಯಮದಲ್ಲಿ ಈ ದೇಶವು ದೈತ್ಯನೆನಿಸಿದೆ. ತಲಾ ಆದಾಯದ ಆಧಾರದ ಮೇಲೆ ಈ ದೇಶವು ಜಗತ್ತಿನ ಅತ್ಯಂತ ಶ್ರೀಮಂತ ದೇಶಗಳಲ್ಲಿ ಐದನೆಯದು ಎನಿಸಿದೆ. 63 ಸಣ್ಣ ದ್ವೀಪಗಳ ಗುಂಪು ಎನಿಸಿರುವ ಈ ಪುಟ್ಟ ದೇಶವು ಇಂಗ್ಲಿಷ್, ಮಲಯ, ತಮಿಳು ಹಾಗೂ ಚೀನೀ ಭಾಷೆಗಳನ್ನು ಅಧಿಕೃತ ಭಾಷೆಗಳನ್ನಾಗಿ ಹೊಂದಿದೆ.

ಸಮುದ್ರದಲ್ಲಿ ಮರಳನ್ನು ಹಾಕಿ ಭೂಭಾಗವನ್ನು ಹೆಚ್ಚಿಸುವುದು ಇಲ್ಲಿ ಒಂದು ಖಾಯಂ ಕೆಲಸವೇ ಆಗಿದೆ. ಹೀಗಾಗಿಯೇ ಸಿಂಗಪುರದ ಭೂಪ್ರದೇಶವು 1960ರಲ್ಲಿ 581.5 ಚದರ ಕಿಮೀ ಇದ್ದುದು ಇಂದು 704 ಚದರ ಕಿಮೀ ಆಗಿದೆ!

ಈ ಸಣ್ಣ ದ್ವೀಪದೇಶದಲ್ಲಿ ಪ್ರವಾಸಿಗರನ್ನು ಆಕರ್ಷಿಸುವುದಕ್ಕಾಗಿ ಹಲವಾರು ಸ್ಥಳಗಳನ್ನು ರಚಿಸಲಾಗಿದೆ. ಅವುಗಳು ಎಂದರೆ ನೈಟ್ ಸಫಾರಿ, ಆರ್ಕಿಡ್ ಬಟಾನಿಕಲ್ ಗಾರ್ಡನ್, ಫೌಂಟನ್ ಆಫ್ ವೆಲ್ತ್ ಇತ್ಯಾದಿ. ಜುರಾಂಗ್ ಬರ್ಡ್ ಪಾರ್ಕಿನಲ್ಲಿ ಹಲವು ವಿಧದ ಹಕ್ಕಿಗಳನ್ನು ಗಮನಿಸಿದಾಗ ಇಲ್ಲಿನ ಪ್ರಕೃತಿಯನ್ನು ಕೃತಕವಾಗಿ ಸೃಷ್ಟಿ ಮಾಡಲಾಗಿದೆ ಎಂಬುದನ್ನು ನಂಬುವುದೇ ಕಷ್ಟ. ಮನೋರಂಜನೆಯ ನಿಜವಾದ ಖಜಾನೆ ಇರುವುದು ಸಿಂಗಪುರದ ಸೆಂಟೋಸಾ ದ್ವೀಪದಲ್ಲಿ. ಇಲ್ಲಿನ 'ಇಮೇಜಸ್ ಆಫ್ ಸಿಂಗಪುರ್'ನಲ್ಲಿ ಸಿಂಗಪುರದ ಇತಿಹಾಸವನ್ನು ಚಿತ್ರಿಸಲಾಗಿದೆ. 'ಅಂಡರ್‌ವಾಟರ್ ವರ್ಲ್ಡ್'ನಲ್ಲಿ ನೀವು ಸಮುದ್ರದ ಅಡಿಯಲ್ಲಿನ ಸಾಗರ ಜೀವಿಗಳನ್ನು ನೋಡಬಹುದು. ನಿಮಗೆ ಸ್ಫೂರ್ತಿ ತುಂಬುವುದಕ್ಕಾಗಿ ಇಲ್ಲಿ 4–ಡಿ ಮ್ಯಾಜಿಕ್ ಷೋ ಕೂಡ ಇರುತ್ತದೆ. ಸೆಂಟೋಸಾ ದ್ವೀಪದ ಪ್ರಮುಖ ಆಕರ್ಷಣೆ ಎಂದರೆ 'ಸಾಂಗ್ಸ್ ಆಫ್ ದಿ ಸೀ' ಷೋ.

ಇದು ಮಲೇಷಿಯ ಮತ್ತು ಸಿಂಗಪುರದಲ್ಲಿ ಹೊಂದುವ 'ಅಪರಿಮಿತ ಮನೋರಂಜನೆಯ' ಒಂದು ನೋಟ ಮಾತ್ರ. ಮಹಾನ್ ಮನೋರಂಜನೆ ಎಂದರೆ ಈ ಮನೋರಂಜನೆಯ ದ್ವಿ ಕ್ಯಾಪ್ಸೂಲುಗಳು ಥೈಲ್ಯಾಂಡ್ ಜೊತೆ ಸೇರಬೇಕು! ಪಟ್ಟಾಯದ ಬೀಚುಗಳ ಮೇಲೆ ಮನೋರಂಜನೆ ಮತ್ತು ಆನಂದದ ಸವಿ, ಅತ್ಯಾಕರ್ಷಣೆಯ ಅಲ್ಕಝಾರ್ ಷೋ, ಸುಂದರ ಬೌದ್ಧ ಸುವರ್ಣ ಮಂದಿರ ಇವು ನಿಮ್ಮ ಪ್ರವಾಸವನ್ನು ಕಲ್ಪನಾತೀತವಾಗಿ ಸ್ಮರಣಾರ್ಹಗೊಳಿಸುತ್ತವೆ.

ಈ ಕಾರಣಕ್ಕಾಗಿಯೇ ಕೇಸರಿಯು ಬೆಂಗಳೂರಿನಿಂದ ಹೊರಡುವ ಹಲವಾರು ಪ್ರವಾಸದ ಆಯ್ಕೆಗಳನ್ನು ನೀಡಿದೆ. ಸಿಂಗಪುರ್ – ಥೈಲ್ಯಾಂಡ್ – ಮಲೇಷಿಯಾ, ಸಿಂಗಪುರ್ – ಮಲೇಷಿಯಾ – ಅಥವಾ ಥೈಲ್ಯಾಂಡ್‌ನ 15ಕ್ಕೂ ಹೆಚ್ಚಿನ ಪ್ರವಾಸ ಆಯ್ಕೆಗಳನ್ನು ಕೇಸರಿ ಲಭ್ಯಗೊಳಿಸುವುದು. ಇಂದೇ ನಿಮ್ಮ 'ಫನ್ ಅನ್‌ಲಿಮಿಟೆಡ್' ಪ್ರವಾಸವನ್ನು ಬುಕ್ ಮಾಡಿರಿ. ಹೆಚ್ಚಿನ ಮಾಹಿತಿಗಾಗಿ, ನಮ್ಮ ವೆಬ್‌ಸೈಟ್ www.kesari.in ಅನ್ನು ಭೇಟಿ ಮಾಡಲು ಅಥವಾ ನಮ್ಮ ಟಾಲ್ ಫ್ರೀ ಹೆಲ್ಪ್‌ಲೈನ್ 1800 22 1100ಗೆ ಕರೆಮಾಡಲು ಮುಕ್ತ ಭಾವನೆ ಹೊಂದಿರಿ.




Bengaluru 4128 2222 • www.kesari.in • SMS KESARI <space> your message to 56677 • Toll free 1800 22 1100